ವಿ. ರಶ್ಮಿ, ಭಾ. ಆ. ಸೇ.
ಸರ್ಕಾರದ ಕಾರ್ಯದರ್ಶಿ
V. RASHMI, I.A.S.
Secretary to Government

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ.ಪ.ಸಂಖ್ಯೆ: ಗ್ರಾಅಪ/215/ಗ್ರಾಪಂಅ/2013 ದಿನಾಂಕ: 09-07-2013.

ಮಾನ್ಯರೆ,

ವಿಷಯ: 2013-14ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಗಳನ್ನು ನಡೆಸಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 8 ಗ್ರಾಪಂಅ 2012, ದಿನಾಂಕ:08-03-2012.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 250 ಗ್ರಾಪಂಅ 2011, ದಿನಾಂಕ:22-09-2011.
3. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಗ್ರಾಅಪ 215 ಗ್ರಾಪಂಅ 2013, ದಿನಾಂಕ: 08-06-2013.
4. ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 27-05-2013 ಮತ್ತು 28-05-2013 ರಂದು ನಡೆಸಿದ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯಲ್ಲಿನ ನಡವಳಿಗಳು.
5. ದಿನಾಂಕ: 26-07-2013, 27-06-103, 28-06-2013 ಮತ್ತು 29-06-2013 ರಂದು ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವಿಡಿಯೋ ಸಂವಾದ.

-----

ಕರ್ನಾಟಕ ಪಂಚಾಯತಿ ರಾಜ್ ಅಧಿನಿಯಮ, 1993 ರ ಪ್ರಕರಣ 3-ಎ ರಲ್ಲಿ ನಿಯತ ಮತ್ತು ಮಧ್ಯಂತರ ಗ್ರಾಮ ಸಭೆಯನ್ನು ಸಮಾವೇಶಗೊಳಿಸುವುದನ್ನು ಗ್ರಾಮ ಪಂಚಾಯತಿಗಳಿಗೆ ಕಡ್ಡಾಯಗೊಳಿಸಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಕ್ಕೆ ಅನುಗುಣವಾಗಿ ಗ್ರಾಮ ಸಭೆಗಳು ಸುಗಮವಾಗಿ ಮತ್ತು ಪರಿಣಾಮಕಾರಿಯಾಗಿ ವಿಕೇಂದ್ರೀಕೃತ ಪ್ರಜಾಪ್ರಭುತ್ವದ ನೈಜ ಚೈತನ್ಯದೊಡನೆ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ 2004 ರಲ್ಲಿ ವಿಸ್ತೃತ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಇದಲ್ಲದೆ ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

-2-

ಗ್ರಾಮೀಣ ಪ್ರದೇಶಗಳ ಸಮಗ್ರ ಹಾಗೂ ಪರಿಣಾಮಕಾರಿ ಅಭಿವೃದ್ಧಿಯನ್ನು ನೆರವೇರಿಸಲು ಗ್ರಾಮ ಸಭೆಗಳು ಸಮಂಜಸವಾಗಿ ನಡೆಯುವುದು ಅತ್ಯಗತ್ಯವಾಗಿದ್ದು, ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ನಡೆಸಲಾಗುವ ಗ್ರಾಮ ಸಭೆಗಳ ಕಲಾಪವನ್ನು ವಿಡಿಯೋ ಚಿತ್ರಿಕರಿಸುವುದನ್ನು ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿ ಕಡ್ಡಾಯಗೊಳಿಸಲಾಗಿದೆ. ಎಲ್ಲಾ ಗ್ರಾಮ ಸಭೆಗಳ ವಿಡಿಯೋ ಚಿತ್ರೀಕೆರಣದ ಸಿಡಿ/ಡಿವಿಡಿ ಕಡ್ಡಾಯವಾಗಿ ಗ್ರಾಮ ಪಂಚಾಯಿತಿಯಲ್ಲಿ ಕಾಯ್ದಿರಿಸಬೇಕು. ವಿಡಿಯೋ ಚಿತ್ರೀಕರಣದ ಸಿಡಿ/ಡಿವಿಡಿ ಯನ್ನು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ನಿರ್ವಹಣೆ ಮಾಡಲು ಜವಾಬ್ದಾರನಾಗಿರುತ್ತಾನೆ ಮತ್ತು ಗ್ರಾಮ ಪಂಚಾಯಿತಿಯ ಶಾಶ್ವತ ದಾಖಲೆ ಎಂದು ಪರಿಗಣಿಸತಕ್ಕದ್ದು.

ಎಲ್ಲಾ ಯೋಜನೆಗಳ ಮತ್ತು ಸ್ವಂತ ಸಂಪನ್ಮೂಲ ಕ್ರೋಢೀಕೃತ 2013-14ರ ಕಾಮಗಾರಿವಾರು ಸಮಗ್ರ ವಾರ್ಷಿಕ ಕ್ರಿಯಾ ಯೋಜನೆ ಮತ್ತು ಆಯ-ವ್ಯಯ ಅನುಮೋದನೆಗಾಗಿ ಗ್ರಾಮ ಸಭೆಗಳನ್ನು ನಡೆಸಿ, ಕಡ್ಡಾಯವಾಗಿ ವಿಡಿಯೋ ಚಿತ್ರೀಕರಣ ಮಾಡುವುದು ಹಾಗೂ ನಡವಳಿಯನ್ನು ಸ್ಥಳದಲ್ಲಿಯೇ ತಯಾರಿಸುವುದು. ಸದರಿ ನಡವಳಿಯನ್ನು ಗ್ರಾಮ ಸಭೆ ಮುಗಿದ ಕೂಡಲೇ ಪಂಚತಂತ್ರ ತಂತ್ರಾಂಶದಲ್ಲಿ ಸಹ ಅಳವಡಿಸುವುದು. ಈ ಎಲ್ಲಾ ಪ್ರಕ್ರಿಯೆಯನ್ನು ದಿನಾಂಕ:10-06-2013 ರೊಳಗೆ ಮುಗಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೂಡಲೇ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಉಲ್ಲೇಖ (3) ರ ಅರೆ ಸರ್ಕಾರಿ ಪತ್ರದಲ್ಲಿ ಸೂಚಿಸಿದೆ.

ದಿನಾಂಕ: 26-07-2013, 27-06-103, 28-06-2013 ಮತ್ತು 29-06-2013 ರಂದು ನಡೆದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವಿಡಿಯೋ ಸಂವಾದದಲ್ಲಿ ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಗಳನ್ನು ನಡೆಸುತ್ತಿದ್ದು, ಕೂಡಲೇ ನಡವಳಿಗಳನ್ನು ಮತ್ತು **ಫೋಟೋಗಳನ್ನು** (GPS Coordinates ದೊಂದಿಗೆ ದಿನಾಂಕ ಮತ್ತು ವೇಳೆಯೊಂದಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ವತಿಯಿಂದ ನೀಡಿರುವ GPS Handset ಬಳಸಿ ಫೋಟೋ ತೆಗೆಯುವುದು) **ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲು** ಕ್ರಮ ವಹಿಸಲಾಗುವುದೆಂದು ತಿಳಿಸಲಾಗಿದ್ದು, ಅದರಂತೆ ಈ ಎಲ್ಲಾ ಪ್ರಕ್ರಿಯೆಯನ್ನು ಜುಲೈ 15 ರೊಳಗೆ ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ತಿಳಿಸಿರುತ್ತೀರಿ. ಆದುದರಿಂದ ನಿಮ್ಮ ಪಾಲನಾ ವರದಿಯನ್ನು ಸರ್ಕಾರಕ್ಕೆ ದಿನಾಂಕ: 16-07-2013 ರೊಳಗೆ ಕಳುಹಿಸಲು ಸೂಚಿಸಿದೆ.

ಮತ್ತು ಪ್ರತಿ ಗ್ರಾಮ ಪಂಚಾಯಿತಿಯು 2013-14ನೇ ಸಾಲಿನಲ್ಲಿ (ಮೇ ತಿಂಗಳಿನಿಂದ ಜುಲೈ 2013 ರವರೆಗೆ) ನಡೆಸಿರುವ ಗ್ರಾಮ ಸಭೆಯ ಕಲಾಪದ ವಿಡಿಯೋ ಚಿತ್ರೀಕರಿಸಿರುವ ಸಿಡಿ ಅಥವಾ ಡಿವಿಡಿ ಗಳನ್ನು ಪ್ರತಿ ಗ್ರಾಮ ಪಂಚಾಯಿತಿಯಿಂದ ಪಡೆದು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ದೇಶಕರು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ದಿನಾಂಕ: 20-07-2013 ರೊಳಗೆ ನೊಂದಾಯಿತ ಅಂಚೆ ಮೂಲಕ ಕಳುಹಿಸುವಂತೆ ಕೋರಿದೆ. ಗ್ರಾಮ ಪಂಚಾಯಿತಿವಾರು ಗ್ರಾಮ ಸಭೆ ಕಲಾಪದ ವಿಡಿಯೋ ಚಿತ್ರೀಕರಿಸಿದ ಸಿಡಿ/ಡಿವಿಡಿಯೊಂದಿಗೆ ಮಾಹಿತಿಯನ್ನು ಈ ಅರೆ ಸರ್ಕಾರಿ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ ಕಳುಹಿಸತಕ್ಕದ್ದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(signature)

ಎಲ್ಲಾ ಜಿಲ್ಲಾ ಪಂಚಾಯತಿ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

# ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಯ ಕಲಾಪದ ವಿಡಿಯೋ ಚಿತ್ರೀಕರಿಸಿರುವ ಸಿಡಿ/ಡಿವಿಡಿ ಯ ಮಾಹಿತಿ

ವರ್ಷ: 2012–13

ತಿಂಗಳು: ಮೇ–ಜುಲೈ

| ಗ್ರಾಮ ಪಂಚಾಯಿತಿ ಹೆಸರು | ಗ್ರಾಮ ಸಭೆ ನಡೆದ ದಿನಾಂಕ: | ಗ್ರಾಮ ಸಭೆಯಲ್ಲಿ ಭಾಗವಹಿಸಿದ ಒಟ್ಟು ಗ್ರಾಮ ಸಭಾ ಸದಸ್ಯರ ಸಂಖ್ಯೆ | ಗ್ರಾಮ ಸಭೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಭಾಗವಹಿಸಿದ್ದರೆ ಅಥವಾ ಇಲ್ಲವೆ? | ಗ್ರಾಮ ಸಭೆಯಲ್ಲಿ ಭಾಗವಹಿಸಿದ ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆ | ಗ್ರಾಮ ಸಭೆಯಲ್ಲಿ ಭಾಗವಹಿಸಿದ ಒಟ್ಟು ಗ್ರಾಮ ಪಂಚಾಯಿತಿ ಅಧಿಕಾರಿ/ನೌಕರರ ಸಂಖ್ಯೆ | ಗ್ರಾಮ ಸಭೆಯಲ್ಲಿ ಭಾಗವಹಿಸಿದ ಒಟ್ಟು ತಾಲ್ಲೂಕು ಮಟ್ಟದ ಅಧಿಕಾರಿಗಳ ಸಂಖ್ಯೆ |
|---|---|---|---|---|---|---|
| ೧ | 2 | 3 | 4 | 5 | 6 | 7 |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

_________ಜಿಲ್ಲಾ ಪಂಚಾಯಿತಿ,